ಚಂದ್ರಗುತ್ತಿ ಗ್ರಾಮದ ಶಿವಮೊಗ್ಗ ಜಿಲ್ಲೆಯಲ್ಲಿ ನಗ್ನ ಪ್ರದರ್ಶನದ ಬಗ್ಗೆ

೪೧೮ ಬಿ. ಬಸವಲಿಂಗಪ್ಪ, (ಯಲಹಂಕ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಚಂದ್ರಗುತ್ತಿ ಗ್ರಾಮ, ಸೊರಬ ಶಿವಮೊಗ್ಗ ಜಿಲ್ಲೆಯಲ್ಲಿ ದೇವರ ಹೆಸರಿನಲ್ಲಿ ಮಹಿಳೆಯರು ಮತ್ತು ಹುಡುಗಿಯರು ನಗ್ನ ಪ್ರದರ್ಶನ ಮಾಡುವ ಪದ್ಧತಿ ಇದೆಯೇ ?

೨. ಹೌದಾದಲ್ಲಿ ಇದು ಯಾವಾಗಲಿಂದ ಜಾರಿಗೆ ಬಂದಿದೆ.

೩. ಇಲ್ಲಿ ಯಾವ ಜಾತಿ ಮಂತ್ತು ವರ್ಗದವರು ನಗ್ನ ಪ್ರದರ್ಶನ ಮಾಡುತ್ತಾರೆ.

೪. ಈ ಮೂಢ ನಂಬಿಕೆಯನ್ನು ನಿಲ್ಲಿಸಲು ಸರ್ಕಾರದವರು ಪ್ರಯತ್ನವನ್ನು ಮಾಡಿದ್ದಾರೆಯೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

೧. ಹೌದು.

೨. ಇದು ಬಹುಶ: ಪುರಾತನ ಕಾಲದಿಂದ ಬಂದಿರುವ ವಾಡಿಕೆ. ಆದರೆ ಇದಕ್ಕೆ ಬಂದಿರುವ ನಿಗಧಿತ ಕಾಲ ಯಾವುದೆಂದು ಗೊತ್ತಿಲ್ಲ

೩. ಎಲ್ಲಾ ಕೋಮಿನ ಮಹಿಳೆಯರು ಮತ್ತು ಹುಡುಗಿಯರು ಈ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಆದರೆ, ಹಿಂದುಳಿದ ಜನಾಂಗದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮಾತ್ರ ಬೆತ್ತಲೆ ಸೇವೆಯನ್ನು ಮಾಡುತ್ತಾರೆ.

೪. ಹೌದು,

೧. ಸಾಮಾಜಿಕ ಸಂಪ್ರದಾಯಗಳಿಂದ ಆಗುವ ತೊಂದರೆಯ ಬಗ್ಗೆ ವ್ಯಾಪಕ ಪ್ರಚಾರವನ್ನು ಈ ಇಲಾಖೆಯು ಕೈಕೊಂಡಿದೆ.

೨. ಈ ಜಾತ್ರೆಯ ಸಂದರ್ಭದಲ್ಲಿ ಸ್ಥಳೀಯ ಆರಕ್ಷಕರ ಮಹಿಳಾ ಮಂಡಲ ಮತ್ತು ಯುವತಿ ಮಂಡಲದವರಿಂದ ಕರಪತ್ರಗಳನ್ನು ಹಂಚುವ ಮುಖಾಂತರ ಸಾರ್ವಜನಿಕರಲ್ಲಿ ಒಳ್ಳೆಯ ತಿಳುವಳಿಕೆ ಮೂಡಲು ಹಾಗೂ ಮೂಢ ನಂಬಿಕೆಯನ್ನು ಹೋಗಲಾಡಿಸಿ, ಸಾಮಾಜಿಕ ಪ್ರಜ್ಞೆ ಬೆಳೆಯುವಂತೆ ಮಾಡಲಾಗಿದೆ.

೩. ಹಳ್ಳಿಗಳಲ್ಲಿ ಯುವ ಕೇಂದ್ರಗಳ ಮುಖಾಂತರ ಶಿಬಿರಗಳ ಸಂಘಟನೆಗಳನ್ನು ಏರ್ಪಾಡು ಮಾಡಲಾಗಿದೆ. ಜಿಲ್ಲಾ ಮಟ್ಟದ ಸಂಕೀರ್ಣಗಳನ್ನು ಚಂದ್ರಗುತ್ತಿಯಲ್ಲಿ ಅಲ್ಲದೆ ಅಕ್ಕಪಕ್ಕದ ಹಳ್ಳಿಗಳಾದ ಕುಪ್ಪಗುಡ್ಡ, ಜೆಡೆ, ಅಸವಟ್ಟಿ, ಮತ್ತು ಸೊರಬಗಳಲ್ಲಿ ನಡೆಸಲಾಗಿದೆ.

೪. ಇದರ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಬೀದಿ ನಾಟಕಗಳ ಮುಖಾಂತರ ತಿಳುವಳಿಕೆ ನೀಡಿರುತ್ತಾರೆ.

೫. ಕಳೆದ ವರ್ಷದಿಂದ ಈ ಜಾತ್ರೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಸಹಕಾರಿ ಮಿನಿಂ ಮಾರಾಟ ಮಂಡಳಿಗೆ ನೀಡಲಾಗಿರುವ ಸಾಲದ ಬಗ್ಗೆ

೨೨೯ ಶ್ರೀ ಜಿ, ಎಸ್, ಆಚಾರ್ (ಬೈಂದೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ, ಮಂಗಳೂರು ಇವರು ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ ಮಂಡಳಿಗೆ ನೀಡಲಾಗಿರುವ ಸಾಲದ ವಸೂಲಾತಿಗೆ ಸರಕಾರ ನೀಡಿದ ಗ್ಯಾರಂಟಿ ಪ್ರಕಾರ ಬಹಳ ಹಿಂದೆಯೇ ಕ್ರಮ ತೆಗೆದುಕೊಂಡಿರುವುದು ನಿಜವೇ ?

೨. ಹಾಗಿದ್ದರೆ ಸಾಲ ಮರುಪಾವತಿಗೆ ಏಕೆ ವಿಳಂಬವಾಗಿದೆ ?

೩. ಸಾಲ ಮತ್ತು ಬಡ್ಡಿ ವಸೂಲಾತಿಗಾಗಿ ಕೈಗೊಂಡಿರುವ ಕ್ರಮವೇನು ?